5. ಶಾಸನ ರಚನೆ

1990ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪಮೊಯ್ಲಿ (ಕಾನೂನು ಸಂಸದೀಯ ವ್ಯವಹಾರ, ಯೋಜನೆ, ವಾರ್ತಾ ಪ್ರವಾಸೋದ್ಯಮ ಹಾಗೂ ಯುವ ಜನಸೇವೆ ಮಂತ್ರಿಗಳು).—ಅಧ್ಯಕ್ಷರೇ, ಮಾನ್ಯ ಬಂದರು, ವಿಮಾನಯಾನ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ "೧೯೯೦ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರಿಕೆಯನ್ನು ಮಂಡಿಸುತ್ತೇನೆ."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ; "೧೯೯೦ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

("ಹೌದು" ಎಂದು ಹೇಳಿದ್ದು ಯಾರಿಗೂ ಕೇಳಿಸಲಿಲ್ಲ.)

ಅಧ್ಯಕ್ಷರು —ಪ್ರಸ್ತಾವವು "ಇಲ್ಲ" ಎನ್ನುವವರ ಪರವಾಗಿದೆ ಎಂದು ನಾನು ಭಾವಿಸುತ್ತೇನೆ.

(ಈ ಸಮಯದಲ್ಲಿ ವಿರೋಧ ಪಕ್ಷದ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)

AN HON. MEMBER. – Congratulations, Mr. Speaker.

MR. SPEAKER.–It is not a question of congratulating the Speaker. It is a voice vote. ಪ್ರಸ್ತಾವದ ಪರವಾಗಿ ಹೌದು ಎನ್ನುವವರು ಯಾರೂ ಹೇಳಿದ್ದು ನನಗೆ ಕೇಳಿಸಲಿಲ್ಲ. ಒಬ್ಬರೂ ಹೌದು ಎಂದು ಹೇಳುವುದಿಲ್ಲವೆಂದರೆ ಹೇಗೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾವು "ಹೌದು" ಎಂದು ಹೇಳಿದೆವು.

MR. SPEAKER.—I may be deaf, I did not hear.

ಶ್ರೀ ಎಂ. ವೀರಪ್ಪಮೊಯ್ಲಿ.—ಹೌದು ಎಂದು ನಾವೆಲ್ಲಾ ಹೇಳಿದ್ದೇವೆ.

ಅಧ್ಯಕ್ಷರು.—ನಾನು ಪ್ರಸ್ತಾವ ಇಲ್ಲ ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆಂದ ಹೇಳಿದ್ದೇನೆ. ನಾನಿನ್ನೂ ಇಲ್ಲ ಎಂದು ಹೇಳಲಿಲ್ಲ. ಪ್ರಸ್ತಾವವನ್ನು ಮತ್ತೊಮ್ಮೆ ಮತಕ್ಕೆ ಹಾಕುತ್ತೇನೆ. ಆದ್ದರಿಂದ 'ಹೌದು' ಎನ್ನುವವರು ದಯವಿಟ್ಟು 'ಹೌದು' ಎಂದು ಜೋರಾಗಿ ಹೇಳಿ.

ಪ್ರಸ್ತಾವ ಏನೆಂದರೆ "೧೯೯೦ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವದ ಪರವಾಗಿರುವವರು "ಹೌದು" ಎನ್ನಬೇಕು.

ಪ್ರಸ್ತಾವದ ವಿರುದ್ಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

(ಮಾನ್ಯ ಸದಸ್ಯರು "ಹೌದು" ಎಂದು ಜೋರಾಗಿ ಕೂಗಿದರು)

ಅಧ್ಯಕ್ಷರು.—ಪ್ರಸ್ತಾವವು ಈಗ "ಹೌದು" ಎನ್ನುವವರ ಪರವಾಗಿದೆ ಎಂದು ನಾನು ಭಾವಿಸುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಎಂ. ವೀರಪ್ಪಮೊಯಿಲಿ.—(ಕಾನೂನು, ಸಂಸದೀಯ ವ್ಯವಹಾರ, ಯೋಜನೆ, ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಖಾತೆಗಳ ಸಚಿವರು).—ಮಾನ್ಯ ಅಧ್ಯಕ್ಷರೆ, "೧೯೯೦ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ".

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು. *

---

* Annexure